ಅಧ್ಯಕ್ಷರು.—ತಾವು ಅವನ್ನು ಬರೆದುಕೊಡಿ, ನಾನು ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಮತ್ತೊಂದು ವಿಚಾರ ಅಂದರೆ ಇವೊತ್ತು ನನಗೆ ಇದಕ್ಕಿದ್ದ ಹಾಗೆ ಸ್ಥಾನ ಬದಲಾವಣೆಯಾಗಿದೆ, ನಾನು ಬಂದ ತಕ್ಷಣ ದಿಗ್ಭ್ರಮೆಯಾಯಿತು.

ಅಧ್ಯಕ್ಷರು,—ನಿಮಗೆ ದಿಗ್ಭ್ರಮೆಯಾಯಿತು, ನನಗೆ ಬಹಳ ಸಂತೋಷವಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಏತಕ್ಕೆ ನಮ್ಮನ್ನು ಬೇರ್ಪಡಿಸಿದಿರಿ ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಹೋದವಾರ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಾಗ ತಾವು ಸೀರಿಯಸ್ ಆಗಿ ಹೇಳಿದಿರಿ ಎಂದು ನನಗೆ ತಿಳಿಯಲಿಲ್ಲ.

ಕನಕಪುರ ತಾಲ್ಲೂಕಿನಲ್ಲಿ ೨ ಆನೆಗಳು ಸತ್ತಿರುವ ಬಗ್ಗೆ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ನಿನ್ನೆ ದಿವಸ ನಾನು ಮನೆಗೆ ಹೋದಾಗ ನಿಮ್ಮ ಸ್ಥಾನ ಬದಲಾವಣೆ ಮಾಡಿದ್ದೀರೆಂದು ಹೇಳುವ ತಮ್ಮ ಪತ್ರ ಬಂದಿತ್ತು. ಇಂತಹ ಅನ್ಯಾಯವಾಗಿದೆಯೆಲ್ಲಾ ಎಂದು ರಾತ್ರಿ ಇಡೀ ನಿದ್ದೆ ಮಾಡಲಿಲ್ಲ, ದಯಮಾಡಿ ತಾವು ಮರು ಪರಿಶೀಲನೆ ಮಾಡಿ ನಮ್ಮಿಬ್ಬರನ್ನೂ ಬದಲಿಸುವುದು ಬೇಡ ಮೊದಲಿದ್ದಲ್ಲೇ ಹಾಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಮಗೆ ಒಂದು ಪತ್ರ ಬರದು ಇಂದು ಈ ಸಭೆ ಪ್ರಾರಂಭವಾಗುವುದಕ್ಕೆ ಮೊದಲು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಬಾರದೇ ಇರುವುದರಿಂದಾಗಿ ಅವರ ಪರವಾಗಿ ಮಾನ್ಯ ಕಾನೂನು ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತರಬಯಸುತ್ತೇನೆ. ಕಳೆದ ವಾರದಲ್ಲಿ ನಮ್ಮ ಕನಕಪುರ ತಾಲ್ಲೂಕಿನಲ್ಲಿ ೩ ಆನೆಗಳು ಎರಡು ದಿವಸದಲ್ಲಿ ಸತ್ತು ಹೋಗಿದೆ. ಈ ಆನೆಗಳು ಸತ್ತಿರುವುದರ ಜೊತೆಗೆ ಈ ಆನೆಗಳಲ್ಲಿದ್ದಂತಹ ದಂತವನ್ನು ಆನೆಗಳನ್ನು ಕೊಂಡು ಹೋದಂತಹ ಜನ ತೆಗೆದುಕೊಂಡು ಹೋಗಿದ್ದಾರೆ. ನಮ್ಮ ತಾಲ್ಲೂಕಿನ ಜನರು ಭಯಭೀತರಾಗಿದ್ದಾರೆ. ಅಲ್ಲಿ ಬೀಳೀ ಕಲ್ಲು ಬೆಟ್ಟ ಏನೇ ಇದೆ, ಆದು ಕೊಳ್ಳೇಗಾಲಕ್ಕೆ ಮತ್ತು ವೀರಪ್ಪನ್ ಇರತಕ್ಕಂತಹ ಕಾಡಿಗೆ ಅಂಟಿಕೊಂಡಿರತಕ್ಕಂತಹ ಒಂದು ಕಾಡಿನ ಪ್ರದೇಶ ಆದು. ಸುಮಾರು ೨೦೦ ಕ್ಕೂ ಹೆಚ್ಚು ಆನೆಗಳು ಕೊಳ್ಳೇಗಾಲದ ಈ ಅರಣ್ಯ ಪ್ರದೇಶದಲ್ಲಿ ಇವೆ. ಅರಣ್ಯ ಇಲಾಖೆಯವರು ಇಲ್ಲವೇ ಪೋಲೀಸ್ ಇಲಾಖೆಯವರು ವೀರಪ್ಪನ್ ಅನ್ನು ಹಿಡಿಯಲು ಹೋದಾಗ ಅಲ್ಲಿರತಕ್ಕಂತಹ ಆನೆಗಳು ಕನಕಪುರಕ್ಕೆ ಹೋಗಿರಬಹುದು. ಆಲ್ಲಿರುವ ಬೆಳೆಗಳನ್ನು ಹಾಳು ಮಾಡುತ್ತಿದೆ ಇದರಿಂದಾಗಿ ಜನಗಳು ಭಯಭೀತರಾಗಿದ್ದಾರೆ ನಾನು ಮೊನ್ನೆ ಸದನ ಮುಗಿಸಿಕೊಂಡು ಶನಿವಾರ ನನ್ನ ಕ್ಷೇತ್ರಕ್ಕೆ ಹೋದಾಗ ಆನೆಗಳು ಅಲ್ಲಿಯೇ ಬಿದ್ದದ್ದನ್ನು ಸ್ವತಃ ನಾನೇ ನೋಡಿದ್ದೇನೆ. ಈ ಕಡೆ ಅರಣ್ಯ ಇಲಾಖೆಯವರು ಮತ್ತು ಪೋಲೀಸ್ ಇಲಾಖೆಯವರೂ ಕೂಡ ಗಮನ ಕೊಟ್ಟಿಲ್ಲ. ದಂತ ಕಳ್ಳರು ಯಾರು ಎಂದು ಕಂಡು ಹಿಡಿಯುವ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲ. ಅರಣ್ಯ ಸಚಿವರಗಮನಕ್ಕೆ ಇದು ಬಂದಿದ್ದರೆ, ಅವರು ಇದರ ಬಗ್ಗೆ ತಿಳಿಸಬೇಕು, ೩ ಆನೆಗಳು ಎರಡು ದಿವಸದಲ್ಲಿ ಸತ್ತಿವೆ ದಂತಗಳು ಮಾಯವಾಗಿದೆ. ವೀರಪ್ಪನ್ ಕಡೆಯವರು ಯಾರಾದರೂ ಮಾಡಿದ್ದಾರೆಯೇ ಎಂಬುದನ್ನು ತಿಳಿಸಬೇಕು, ಸುಮಾರು ೧೦೦–೧೫೦ ಆನೆಗಳನ ಬಂದು ಬೆಳೆ ಹಾಳು ಮಾಡೇತ್ತಿವೆ ಅಲ್ಲಿ ಬಿತ್ತನೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ತೆಂಗು, ಮಾವಿನ ಮರಗಳನ್ನು ಹಾಳು ಮಾಡಿದೆ. ಇದರ ಬಗ್ಗೆ ಅರಣ್ಯ ಇಲಾಖೆಯವರು ಇದುವರೆಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದು ನನ್ನ ಗಮನಕ್ಕೆ ಬಂದಿಲ್ಲ. ಪೋಲೀಸ್ ಇಲಾಖೆಯವರೂ ಕೂಡ ಗಮನ ಕೊಟ್ಟ ಹಾಗೆ ಕಾಣುತ್ತಿಲ್ಲ. ಮಾನ್ಯ ಸಚಿವರು ಸರಕಾರಕ್ಕೆ ಇದರ ಬಗ್ಗೆ ಮಾಹಿತಿ ಏನು ಇವೆ ಎಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ. ವೀರಪ್ಪನ್ ಕಡೆಯವರು ಏನಾದರೂ ಈ ಕಡೆಗೆ ಬಂದಿದ್ದರೇ? ಅದರ ಬಗ್ಗೆ ಮಾಹಿತಿ ತಮಗೆ ಬಂದಿದೆಯೇ ಎಂಬುದನ್ನು ಸಹ ತಾವು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದ ವಿಚಾರ ವೀರಪ್ಪನ್ ಅನ್ನು ಹಿಡಿಯುವುದಕ್ಕೆ ಎಷ್ಟೊಂದು ಸಾಹಸ ನಡೆಯುತ್ತಿದೆ. ಅದೆಲ್ಲಾ ಸಂಪೂರ್ಣವಾಗಿ ತಣ್ಣೀರನ್ನು ಎರಚಿದಂತೆ ಆಗಿದೆ. ಆದ್ದರಿಂದ ಆತ ಎಲ್ಲಿ ಬೇಕಾದರೂ ತಿರುಗಾಡಬಹುದು. ಕನಕಪುರದ ವರೆಗೆ ಹೋಗಿ ಆನೆಗಳನ್ನು ಹೊಡೆದು ಕೊಲ್ಲುವ ಮಟ್ಟಕ್ಕೆ ಬರಬೇಕಾದರೆ ಇದು ಬಹಳ ಗಂಭೀರವಾದ ಪರಿಸ್ಥಿತಿ ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದ್ದೆ ಎಂಬುದನ್ನು ತಿಳಿಸಬೇಕು ಮಹದೇಶ್ವರ

ಬೆಟ್ಟದಿಂದ ಸರ್ಕಾರ ಬಿಳಿಗಿರಿರಂಗನ ಬೆಟ್ಟದ ಕಡೆ ಈ ಕಡೆಗೆ ಆನೆಗಳು ಓಡಾಡತಕ್ಕಂತಹ ಪ್ರದೇಶವಾಗಿದೆ. ಈ ರೀತಿ ಪ್ರತಿ ವರ್ಷ ಆನೆಗಳು ಸಾಯುತ್ತಿವೆ ಎಂದರೆ ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಕನಕಪುರದಿಂದ ಬಂದಿರತಕ್ಕಂತಹ ಆನೆ ಸಾವಿನಿಂದ ಅಲ್ಲಿನ ಜನರಿಗೆ ಭಯ ಭೀತಿ ಉದ್ಭವವಾಗಿದೆ, ಇದರ ಬಗ್ಗೆ ಯಾವ ರೀತಿ ಪರಿಣಾಮಕಾರಿಯಾದ ಕ್ರಮವನ್ನು ಕೈಗೊಂಡಿದ್ದೀರಾ ಎಂಬುದಾಗಿ ನಾವು ತಿಳಿಸಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ಇಲ್ಲಿ ಒಂದು ಕಡೆ ವಿಷಾಗಿದೆ ಅಂದರೆ ಆನೆ ಸತ್ತಿರುವುದಕ್ಕೂ ವೀರಪ್ಪನ್ ಬದುಕಿರುವುದಕ್ಕೂ. ಈ ಸಾವು ಬದುಕಿಗೂ ವಿಷಾದರೂ ಸಂಬಂಧವಿದೆಯೇ ಇದನ್ನು ಆದರೂ ಸರಕಾರ ಪರಿಶೀಲನೆ ಮಾಡಬೇಕಲ್ಲವೇ ? ಆನೆ ಸಾಯುವುದಕ್ಕೂ ವೀರಪ್ಪನ್ ಬದುಕಿರುವುದಕ್ಕೂ ಸಂಬಂಧವಿದೆಯೇ ? ಇದನ್ನು ಪರಿಶೀಲನೆ ಮಾಡಿ ಸರಕಾರ ಈ ಸದನಕ್ಕೆ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಆನೆಗಳು ಸತ್ತಿರುವುದು ನಿಜ, ಅದು ಆಂದೇ ನನ್ನ ಗಮನಕ್ಕೆ ಬಂದಿದೆ ಕೊಂಬುಗಳು ಕಳವಾಗಿರುವುದೂ ಕೂಡ ನಿಜ. ಇದಕ್ಕೆ ಯಾರು ಕಾರಣರು ಎಂಬುದನ್ನು ಪತ್ತೆ ಹಚ್ಚಬೇಕಾಗುತ್ತದೆ ಪಾಪ ವೀರಪ್ಪನ್ ಎಲ್ಲಿದ್ದಾನೋ ನನಗೆ ಗೊತ್ತಿಲ್ಲ

ಶ್ರೀ ವಾಟಾಳ್ ನಾಗರಾಜ್.—ವೀರಪ್ಪನ್ ಬಗ್ಗೆ ಪಾಪ ಎಂದು ಸರ್ಟಿಫೀಕೇಟನ್ನು ಮಾನ್ಯ ಅರಣ್ಯ ಮಂತ್ರಿಗಳೇ ಕೊಡುತ್ತಿದ್ದಾರೆ, ಬೇರೆ ಯಾರೂ ಅಲ್ಲ. ನಮಗೆ ಇದು ನಿಜಕ್ಕೂ ನಾಚಿಕೆಯಾಗುತ್ತದೆ ಈ ಪಾಪ ಎಂಬ ಪದ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನು ಏತಕ್ಕೆ ಹೇಳಿದೆ ಅಂದರೆ.....

ಪ್ರೊ ಎಂ. ಡಿ. ನಂಜುಂಡಸ್ವಾಮಿ,—ಮಾನ್ಯ ಸಭಾಧ್ಯಕ್ಷರೆ, ಕನಕಪುರದ ಹತ್ತಿರ ಆನೆಗಳ ಸತ್ತಿರತಕ್ಕ ವಿಚಾರ ನನ್ನ ಗಮನಕ್ಕೆ ಬಂದಿದೆ. ನಾನು ಏತಕ್ಕೆ ಎದ್ದು ನಿಂತಿದ್ದೇನೆಂದರೆ, ಆನೆಗಳು ಸತ್ತಿರತಕ್ಕದ್ದೂ ನಿಜ ; ಅವುಗಳ ಕೊಂಬು ಕಳವು ಆಗಿರತಕ್ಕದ್ದೂ ನಿಜ. ಅದನ್ನು ಯಾರು ಮಾಡಿದ್ದಾರೆಂಬುದನ್ನು ಪತ್ತೆ ಹಚ್ಚುವ ವಿಚಾರಕ್ಕೆ ಮಾನ್ಯ ಮಂತ್ರಿಗಳಿಂದ ಒಂದು ರೀತಿಯ ಉತ್ತರ ಬರುತ್ತಿತ್ತು. ಮಾನ್ಯ ಸಿದ್ಧರಾಮಯ್ಯನವರು ಮಾತನಾಡುವಾಗ ಅರಣ್ಯ ಇಲಾಖೆಯ ಅಧಿಕಾರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡಿದ್ದಾರೋ, ಇಲ್ಲವೋ ಎನ್ನುತಕ್ಕ ಮಾತನ್ನು ಹೇಳಿದ್ದಾರೆ. ಆದರೆ ನನಗೆ ಬಂದಿರತಕ್ಕ ಮಾಹಿತಿಯ ಪ್ರಕಾರ ಆನೆಗಳ ಕೊಂಬು ಕಳುವಾದ ೨ ದಿವಸಗಳನಂತರ ಆ ಆನೆಗಳನ್ನು ಸಂಟ್ಟುಹಾಕಿದ್ದಾರೆ. ಆದ್ದರಿಂದ ಈ ರೀತಿ ಆನೆಗಳನ್ನು ಕೊಂದವರು ಯಾರು ಎಂಬುದನ್ನು ತನಿಖೆ ಮಾಡಿಸಲು ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ ಬಿ ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೆ ಈ ಬಗ್ಗೆ ತನಿಖೆಗೆ ನಾವು ಹುಕುಂ ಮಾಡಿದ್ದೇವೆ. ಆದರೆ ವೀರಪ್ಪನ್‌ಗೂ ಮತ್ತು ಈ ಆನೆಗಳು ಸತ್ತಿರುವುದಕ್ಕೂ ಒಂದಕ್ಕೊಂದಕ್ಕೆ ಗಂಟು ಹಾಕತಕ್ಕದ್ದು ಸರಿಯೇ, ಅಲ್ಲವೆ, ಎಂಬುದನ್ನು ಹೇಳುತ್ತಿದ್ದೇನೆ. ಅಲ್ಲಿ ನಾವು ಪೋಲಿಸ್ ಫೋರ್ಸ್‌ನ್ನು ಬಿಟ್ಟಿದ್ದೇವೆ. ವಷ್ಟು ಕಾಡಿನ ಅಧಿಕಾರಿಗಳು ಈ ಪೋಲೀಸರ ಜೊತೆ ಸೇರಿ ವೀರಪ್ಪನ್ ಅನ್ನು ಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗ ಅಲ್ಲಿ ಕಳವು ಏನೂ ಆಗುತ್ತಿಲ್ಲ. ವೀರಪ್ಪನ್ ಪುನಃ ಇಳಿ ಬಂದು ಕೃತ್ಯವನ್ನು ನೆಡೆಸುವುದಿಲ್ಲ ನೆಂದು ಹೇಳುವುದರಲ್ಲಿ ನನಗೆ ನಂಬಿಕೆ ಇಲ್ಲ. ನಾನು ಮೇಲ್ಮನೆಯಲ್ಲಿ ಈಗಾಗಲೇ ಹೇಳಿದ್ದೇನೆ. ಆ ತದೆ ಕೆಲಸಗಾರರಿಗೆ ಆನೆಗಳ ಕೊಂಬುಗಳನ್ನು ಒದಗಿಸುವುದನ್ನು ಕೊನೆ ಮಾಡಬೇಕೆಂದು ನಾವು ತೀರ್ಮಾನ ಮಾಡಿಕೊಂಡಿದ್ದೇವೆ. ಆದ್ದರಿಂದ ಇನ್ನು ಮುಂದೆ ಕೊಂಬುಗಳ ಕಳ್ಳತನದ ಪ್ರಶ್ನೆ ಬರುವುದಿಲ್ಲ. ಈಗಾಗಲೇ ಹಂತಕರನ್ನು ಹಿಡಿಯಲಿಕ್ಕೆ ಮತ್ತು ಇದರ ತನಿಖೆಗೆ ಆರ್ಡರ್ ಮಾಡಿದ್ದೇವೆ. ಇದರ ಫಲಿತಾಂಶ ಏನಾಗುತ್ತದೆ ಎಂಬುದನ್ನು ಆನಂತರ ತಮಗೆ ತಿಳಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ನನಗೆ ಗೊತ್ತಿರುವಂತೆ ಕಳೆದ ೨೫–೩೦ ವರ್ಷಗಳಿಂದಲೂ ಕೂಡ ಬಿಳಿಕಲ್ ಬೆಟ್ಟಕ್ಕೆ ೧೫೦–೨೦೦ ಆನೆಗಳು ಎಂದೂ ಕೂಡ ಬಂದಿರತಕ್ಕದ್ದು ಗೊತ್ತಿಲ್ಲ. ನಮ್ಮ ಹಳ್ಳಿಗಳಲ್ಲಿ, ಅಥವಾ ಹಳ್ಳಿಗಳ ಪಕ್ಕದಲ್ಲಿ ನಿಂತುಕೊಂಡು ಈ ಆನೆಗಳನ್ನು ನೋಡಬಹುದು. ಒಂದೇ ವಾರದಲ್ಲಿ ೨ ದಿನಗಳ ಅಂತರದಲ್ಲಿ ೩ ಆನೆಗಳು ಸತ್ತುಬಿದ್ದಿವೆ. ಅವುಗಳನ್ನು ನಂತರ ಸುಟ್ಟು ಹಾಕಿರುವ ವಿಚಾರವನ್ನು ಮಾನ್ಯ ಸದಸ್ಯರಾದ ನಂಜುಂಡಸ್ವಾಮಿಯವರು ಹೇಳಿದ್ದಾರೆ. ಅವುಗಳನ್ನು ಸುಟ್ಟು ಹಾಕಿರತಕ್ಕ ವಿಚಾರ ನನಗೆ ಗೊತ್ತಿರಲಿಲ್ಲ.....ವೀರಪ್ಪನ್‌ನನು ಆರೆಸ್ಟ್ ಮಾಡುವ ಬಗ್ಗೆ

ನಾನು ಪುಸ್ತಾಪ ಮಾಡುತ್ತಿಲ್ಲ. ಆದರೆ ೧೫೦–೨೦೦ ಆನೆಗಳನ್ನು ರಕ್ಷಣೆ ಮಾಡುವುದಕ್ಕೆ ನಿಮ್ಮ ಅರಣ್ಯ ಇಲಾಖೆಯವರು ಏನಾದರೂ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆಯೇ ? ತಾವು ಈ ವಿಚಾರದಲ್ಲಿ ತೀವ್ರ ಗಮನಹರಿಸದಿದ್ದರೆ ಈ ಆನೆಗಳನ್ನೂ ಕೂಡ ಅವರು ಕೊಂದುಹಾಕಿಬಿಡುತ್ತಾರೆ. ಅದ್ದರಿಂದ ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಅಶ್ವಾಸನೆ ನೀಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಆಕಡೆ ಗಲಾಟೆ ಆದಮೇಲೆ ಈ ಆನೆಗಳು ಇತ್ತಕಡೆಗೆ ಓಡಿಬಂದಿವೆ ಎಂಬುದನ್ನು ಹೇಳುತ್ತಿದ್ದೇನೆ. ಇತ್ತೀಚೆಗೆ ಪೋಲಿಸರಿಗೂ ಮತ್ತು ವೀರಪ್ಪನ್ ಕಡೆಯವರಿಗೂ ಗಲಾಟೆ ಆದಮೇಲೆ ಆನೆಗಳು ಹೆದರಿ ಈ ಕಡೆಗೆ ಬಂದಿರಬಹುದು. ಆಲ್ಲಿ ಗಲಾಟೆ ಆಗುವುದನ್ನು ತಪ್ಪಿಸಿದರೆ ಈ ಆನೆಗಳು ಪುನಃ ಈ ಕಡೆಯಿಂದ ಆ ಕಡೆಗೆ ಹೋಗಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ.—ವೀರಪ್ಪನ್ ಕಡೆಯವರನ್ನು ಹೆದರಿಸಿ ಎಂದರೆ ನೀವು ಆನೆಗಳನ್ನು ಹೆದರಿಸುವುದೆ ?

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮನ್ನು ನೋಡಿ ಅವು ಹೆದರಿಬಿಟ್ಟಿವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ ನನ್ನ ಹತ್ತಿರ ಇದಕ್ಕೆ ಬೇಕಾದ ಮಾಹಿತಿ ಇದೆ. ಮಾನ್ಯ ಮಂತ್ರಿಗಳು ಅವರ ಅಧಿಕಾರಿಗಳನ್ನು ಕೇಳಲಿ. ಅವರು ಮಾಹಿತಿಗಳನ್ನು ಕೊಡುವುದಕ್ಕೆ ಆಗದಿದ್ದರೆ. ಆಗ ನಾನು ನನ್ನ ಹತ್ತಿರ ಇರತಕ್ಕ ಮಾಹಿತಿಗಳನ್ನು ಕೊಡುತ್ತೇನೆ. ಇವತ್ತು ಏನು ೧೫೦–೨೦೦ ಆನೆಗಳು ಹೆದರಿಕೊಂಡು ಈ ಕಡೆ ಏನು ಬಂದಿವೆ, ಇವುಗಳ ರಕ್ಷಣೆಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ತಾವು ಸಭೆಗೆ ತಿಳಿಸಬೇಕು.

ಅಧ್ಯಕ್ಷರು.—ತಾವು ದಯವಿಟ್ಟು ಈ ಬಗ್ಗೆ ಸ್ಪಡಿ ಮಾಡಿ ಈ ಸಭೆಯಲ್ಲಿ ಒಂದು ಸ್ಟೇಟ್ ಮೆಂಟ್ ಮಾಡಿ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಕಾಸರಗೋಡಿನ ವಿದ್ಯಾರ್ಥಿಗಳಿಗೆ ಸಂಬಂಧ ಪಟ್ಟಂತೆ ನಾನು ತವಂಗ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ಅದು ಏನಾಯಿತು ಎಂಬುದನ್ನು ದಯವಿಟ್ಟು ಹೇಳಬೇಕು. ಏಕೆಂದರೆ ಅದು ಇದುವರೆಗೂ ಬರಲಿಲ್ಲ. ನಾಳೆ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು.—ಅದನ್ನು ನೋಡುತ್ತೇನೆ.

ವಿಷಯ.—ಶಿವಮೊಗ್ಗ ಜಿಲ್ಲೆಯಲ್ಲಿ ಪಠ್ಯ ಪುಸ್ತಕಗಳು ದೊರಕದಿರುವ ಬಗ್ಗೆ.

ಶ್ರೀ ಕೆ. ಎಸ್. ಈಶ್ವರಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಶಾಲಾ ಪಠ್ಯ ಪುಸ್ತಕಗಳು ವಿದ್ಯಾರ್ಥಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುತ್ತಿಲ್ಲ. ನಮ್ಮ ಶಿವಮೊಗ್ಗಾದಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಪಠ್ಯ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದಾರೆ. ಇವುಗಳನ್ನು ಟಿ.ಎ.ಪಿ.ಸಿ.ಎಂ.ಎಸ್.ನಲ್ಲೂ ಕೂಡ ಮಾರಾಟ ಮಾಡುತ್ತಿದ್ದಾರೆ. ಅದರೆ ಪುಸ್ತಕಗಳ ಮೇಲೆ ಮುದ್ರಿಸಿರುವ ಬೆಲೆಯೇ ಒಂದಾದರೆ ಅವರು ಮಾರಾಟ ಮಾಡುತ್ತಿರುವ ಬೆಲೆ ಜಾಸ್ತಿ ಆಗಿದೆ. ನಾವು ಹೋಗಿ ಕೇಳಿದರೆ ಇನ್ನೂ ಪಠ್ಯಪುಸ್ತಕಗಳಿನ್ನು ಬಂದಿಲ್ಲ ಎಂದು ಹೇಳುತ್ತಾರೆ. ಅನಂತರ ಬತ್ತ್ಯಾಯ ಮಾಡಿ ಕೇಳಿದರೆ ಆಗ ಹೊರಕ್ಕೆ ತೆಗೆದುಕೊಡುತ್ತಾರೆ. ಆದರೆ ಹೊರಗಡೆ ಬೇರೆಯವರು ಮಾರಾಟ ಮಾಡತಕ್ಕ ಬೆಲೆಗೂ, ಇವರು ಮಾರಾಟ ಮಾಡತಕ್ಕ ಬೆಲೆಗೂ ಬಹಳಷ್ಟು ವ್ಯತ್ಯಾಸ ಇದೆ. ನಮಗೇ ಇವರು ಈ ರೀತಿ ಮಾಡಬೇಕಾದರೆ ಇನ್ನು ಮಕ್ಕಳು ಹೋಗಿ ಪುಸ್ತಕಗಳನ್ನು ಕೇಳಿದರೆ ಇವರು ಕೊಡುತ್ತಾರೆಯೆ ? ಮಕ್ಕಳು ಎಷ್ಟು ಹಣವನ್ನು ಕೊಟ್ಟು ಕೊಂಡುಕೊಳ್ಳಬೇಕು ಎಂಬ ಬಗ್ಗೆ ಬೆಲೆ ಪಟ್ಟಿಯನ್ನು ಹಾಕಿಲ್ಲ ನಮ್ಮ ಶಿವಮೊಗ್ಗಾದಲ್ಲಿ ಬೇರೆಯವರು ವಿಜ್ಞಾನ ಪುಸ್ತಕಕ್ಕೆ ೩ ರೂಪಾಯಿ ೬೦ ಪೈಸೆಗೆ ಮಾರಾಟ ಮಾಡಿದರೆ ಅದೇ ಟಿ.ಎ.ಪಿ.ಸಿ.ಎಂ.ಎಸ್. ನವರು ಅದೇ ಪುಸ್ತಕವನ್ನು ೫ ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಈ ರೀತಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಇಷ್ಟೇ ಅಲ್ಲ ಇವತ್ತು ವಿದ್ಯಾರ್ಥಿಗಳಿಗೆ ಅವಶ್ಯಕವಾಗಿ ಬೇಕಾದಂಥ ಹಲವಾರು ಪುಸ್ತಕಗಳು ಸಿಕ್ಕುತ್ತಿಲ್ಲ ನನ್ನ ಹತ್ತಿರ ಇರತಕ್ಕ ಮಾಹಿತಿಯನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿ ಕೊಡುತ್ತೇನೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಸಕಾಲದಲ್ಲಿ, ಮುದ್ರಿತ ಬೆಲೆಗೆ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಸಿಕ್ಕುವಂತೆ ಮಾಡಬೇಕೆಂದು ವಿದ್ಯಾರ್ಥಿಗಳ ಪರವಾಗಿ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ತಾವು ವಿಷಯವನ್ನು ಬರೆದುಕಳುಹಿಸಿ, ಮಾನ್ಯ ಮಂತ್ರಿಗಳು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.